ಶ್ರೀ ಪಿ. ಜಿ. ಆರ್. ಸಿಂಧ್ಯ : ಸ್ವಾಮಿ, ಇದು 1992-93ನೇ ಸಾಲಿಗೆ ಅಲ್ಲ. 1993-94ನೇ ಸಾಲಿನಲ್ಲಿ ಕಟ್ಟಿಸುವುದಕ್ಕೆ ಭರವಸೆ ಕೊಡುತ್ತೀರಾ? ನಾವು ಜಾಗವನ್ನು ಕೊಡುತ್ತೇವೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಮೊದಲು ಜಾಗವನ್ನು ನೋಡಿ ಹೇಳುತ್ತೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಕಟ್ಟಡ ಕಟ್ಟಿಸಿಕೊಡುತ್ತೇವೆಂದು ನಿನ್ನೆ ತಾವೇ ಹೇಳಿದಿರಿ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಮಾನ್ಯ ಸದಸ್ಯರು ತಾವೇ ಹಿಂದೆ ಮಂತ್ರಿಗಳಾಗಿದ್ದಿರಿ. ಆಗ ಏತಕ್ಕೆ ಯಾವದೇ ಭರವಸೆಯನ್ನು ಕೊಟ್ಟಿರಲಿಲ್ಲ?

ಶ್ರೀ ಪಿ. ಜಿ. ಆರ್. ಸಿಂಧ್ಯ : ಅಲ್ಲಿ ಐ.ಟಿ.ಐ. ಯನ್ನು ಪ್ರಾರಂಭ ಮಾಡಿದ್ದೇ ನಾನು.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ನಮ್ಮ ಧೋರಣೆ ಏನೆಂದರೆ, ನಮ್ಮ ಸ್ವಂತ ಕಟ್ಟಡದಲ್ಲಿ ಐ.ಟಿ.ಐ.ಅನ್ನು ನಡೆಸಬೇಕೆಂಬುದು. ನಿನ್ನೆ ತಾವು ನನಗೆ ಒಂದು ಪತ್ರವನ್ನು ಬರೆದಿದ್ದೀರಿ. ಇದನ್ನು ಕೂಡಲೇ ಮಾಡಬೇಕೆಂದಿದ್ದೇವೆ. ಆದರೆ, ನಮ್ಮಲ್ಲಿ ಎಷ್ಟು ಹಣ ಇದೆ, ಈ ವ್ಯವಸ್ಥೆಗೆ ಯಾವರೀತಿ ಹಣವನ್ನೊದಗಿಸಬೇಕೆಂದು ಯೋಚನೆ ಮಾಡಬೇಕಾಗಿದೆ. ಆದ್ದರಿಂದ ಈಗ ನಾನು ಭರವಸೆಯನ್ನು ಕೊಡುವುದಕ್ಕಾಗುವುದಿಲ್ಲ. ಆದರೆ ತಕ್ಕ ಕ್ರಮವನ್ನು ಬೇಗನೆ ತೆಗೆದುಕೊಳ್ಳುತ್ತೇನೆ.

<u>ವಿಷಯ :- ಬೇಲೂರಿನಲ್ಲಿ ಕೈಗಾರಿಕಾ ಎಸ್ಟೇಟ್ ಮಂಜೂರಾತಿ.</u>

Q:962

ಶ್ರೀ ಬಿ.ಹೆಚ್.ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಬೇಲೂರಿನಲ್ಲಿ12 ವರ್ಷಗಳ ಹಿಂದೆ ಕೈಗಾರಿಕಾ ಎಸ್ಟೇಟನ್ನು ಪ್ರಾರಂಭಿಸಲು ಸರ್ಕಾರದಿಂದ ಮಂಜೂರಾತಿ ದೊರೆತಿತ್ತೆ?
2) ಹಾಗಿದ್ದಲ್ಲಿ, ಅದು ಈಗ ಯಾವ ಹಂತದಲ್ಲಿದೆ?

ಶ್ರೀ ಸಿ. ಆರ್. ಸಗೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :

1) ಹೌದು
2) 1980ರಲ್ಲಿ ಸರ್ಕಾರವು 1.03 ಎಕರೆ ಜಮೀನನ್ನು ಬೇಲೂರಿನಲ್ಲಿ ಸ್ವಾಧೀನಪಡಿಸಿಕೊಂಡಿದ್ದು ನಂತರ ಸರ್ಕಾರದ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ. ಪುನಃ ಕೆ.ಎಸ್.ಎಸ್.ಐ.ಡಿ.ಸಿ. ಯು 10 ಎಕರೆ ಜಮೀನನ್ನು ಬೇಲೂರಿನಲ್ಲಿ ಸ್ವಾಧೀನಪಡಿಸಿಕೊಳ್ಳಲು ಕ್ರಮ ಕೈಗೊಂಡಿದ್ದು, ಇದಕ್ಕಾಗಿ ಈಗಾಗಲೇ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಲಿಯವರಿಗೆ ಹಣ ಪಾವತಿ ಮಾಡಲಾಗಿದ್ದು, ಈ ಬಗ್ಗೆ ಮಂಡಲಿಯಿಂದ ಭೂ ಸ್ವಾಧೀನದ ನಿರೀಕ್ಷೆಯಲ್ಲಿರುತ್ತದೆ. ಜಮೀನನ್ನು ಸ್ವಾಧೀನ ಪಡಿಸಿಕೊಂಡ ನಂತರ ಸರ್ಕಾರವು ಕೈಗಾರಿಕಾ ವಸಾಹತು ಸ್ಥಾಪಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ : ಮಾನ್ಯ ಅಧ್ಯಕ್ಷರೆ, ಬೇಲೂರಿನಲ್ಲಿ 12 ವರ್ಷಗಳ ಹಿಂದೆ ಕೈಗಾರಿಕಾ ಎಸ್ಟೇಟನ್ನು ಪ್ರಾರಂಭಿಸಲು ಸರ್ಕಾರದಿಂದ ಮಂಜೂರಾತಿ ದೊರೆತಿತ್ತೆ? ಎಂದು ನಾನು ಕೇಳಿರುವ ಪ್ರಶ್ನೆಗೆ ಹೌದು ಎಂದು ಉತ್ತರ ಹೇಳಿದ್ದಾರೆ. ಕಳೆದ 12 ವರ್ಷಗಳಿಂದ ಅಲ್ಲಿ ಕೈಗಾರಿಕಾ ಎಸ್ಟೇಟನ್ನು ಪ್ರಾರಂಭ ಮಾಡದೇ ಇರುವುದಕ್ಕೆ ಕಾರಣವಾದರೂ ಏನು? 1980ನೇ ಇಸವಿಯಲ್ಲಿ ಸರ್ಕಾರ 1.03 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಂಡಿತು ಎಂದು ಹೇಳಿದ್ದಾರೆ. 1.03 ಎಕರೆಯಲ್ಲಿ ಕೈಗಾರಿಕಾ ಎಸ್ಟೇಟನ್ನು ಮಾಡುವುದಕ್ಕೆ ಸಾಧ್ಯವೇ? ಇಷ್ಟು ಜಮೀನನ್ನು ಸ್ವಾಧೀನ ಪಡಿಸಿಕೊಂಡಂಥ ಅಧಿಕಾರಿ ಯಾರು? ಅಲ್ಲಿ ಕೈಗಾರಿಕಾ ಎಸ್ಟೇಟನ್ನು ಪ್ರಾರಂಭ ಮಾಡಬೇಕೆಂಬ ಉದ್ದೇಶದಿಂದ ಈ ಜಮೀನನ್ನು ತೆಗೆದುಕೊಂಡ ಮೇಲೆ ಇದುವರೆಗೂ ಏತಕ್ಕೆ ಪ್ರಾರಂಭ ಮಾಡಲಿಲ್ಲ? ಈ ಕೆಲಸವನ್ನು ಮಾಡಬಾರದೆಂಬ ಉದ್ದೇಶದಿಂದ ಬಹುಶಃ ಇಷ್ಟು ಕಡಿಮೆ ಭೂಮಿಯನ್ನು ಆ ಅಧಿಕಾರಿ ಸ್ವಾಧೀನಪಡಿಸಿಕೊಂಡಿರಬಹುದೆಂದು ಕಾಣಿಸುತ್ತದೆ. ಆದುದರಿಂದ ಈ ಜಮೀನನ್ನು ಸ್ವಾಧೀನಪಡಿಸಿಕೊಂಡ ಅಧಿಕಾರಿ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೀರಾ? ಈಗ 10 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಕ್ರಮ ತೆಗೆದುಕೊಂಡಿದ್ದೇವೆಂದು ಹೇಳುತ್ತಿದ್ದೀರಿ. ಈ 10 ಎಕರೆ ಯಾವ ಸರ್ವೆ ನಂಬರ್ ಎಂಬುದನ್ನು ದಯವಿಟ್ಟು ಮಾನ್ಯ ಮಂತ್ರಿಗಳು ತಿಳಿಸಬೇಕು ಮತ್ತು ಈ ಕೈಗಾರಿಕಾ ಎಸ್ಟೇಟನ್ನು ಯಾವಾಗ ಪ್ರಾರಂಭ ಮಾಡುತ್ತೀರೆಂಬುದನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, 1980ನೇ ಇಸವಿಯಲ್ಲಿ ಬೇಲೂರು ಪಟ್ಟಣದಲ್ಲಿ ಕೈಗಾರಿಕೆಯನ್ನು ಪ್ರಾರಂಭ ಮಾಡಬೇಕೆಂದು ಹೇಳಿ 5 ಜನರ ಬೇಡಿಕೆಯಂತೆ 1.3 ಗುಂಟೆಯಷ್ಟು ಜಾಗವನ್ನು ನಾವು ಸ್ವಾಧೀನ ಪಡೆದುಕೊಳ್ಳಬೇಕೆಂದು ರೆವಿನ್ಯೂ ಅಧಿಕಾರಿಗಳ ಜೊತೆ ಪತ್ರವ್ಯವಹಾರ ನಡೆಸಿ ಇದನ್ನು ನಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಲಾಗಿತ್ತು. ಆದರೆ ಮಾನ್ಯ ಶಾಸಕರು ಅವರು ಸದಸ್ಯರಾದಂತಹ ಕಾಲದಲ್ಲಿ ಈ ಪಟ್ಟಣದ ಮಧ್ಯಭಾಗದಲ್ಲಿ ಜಾಗ ಇರುವುದರಿಂದ ಇಲ್ಲಿ ಕೈಗಾರಿಕೆಯನ್ನು ಸ್ಥಾಪನೆ ಮಾಡಲಿಕ್ಕೆ ಸಾಧ್ಯವಿಲ್ಲ, ಆದ್ದರಿಂದ ಈ ಜಾಗವನ್ನು ಕೃಷಿ ಇಲಾಖೆಗೆ ಬಿಟ್ಟುಕೊಡಬೇಕಾದುದು ಸಮಂಜಸವೆಂದು ಹೇಳಿ ತಾ. 5-3-1989ನೇ ಇಸವಿಯಲ್ಲಿ ಮಾನ್ಯ ಗೌರವಾನ್ವಿತ ಸದಸ್ಯರೇ ನಮ್ಮ ಕೈಗಾರಿಕಾ ಇಲಾಖೆಗೆ ಒಂದು ಪತ್ರವನ್ನು ಬರೆದು ಈ ಜಾಗವನ್ನು ಕೃಷಿ ಇಲಾಖೆಗೆ ವರ್ಗಾಯಿಸಲು ಅವರೇ ಸೂಚನೆ ನೀಡಿದ್ದರು. ಆ ಸೂಚನೆ ಮೇರೆಗೆ ಆ ಜಾಗವನ್ನು ಕೃಷಿ ಇಲಾಖೆಗೆ ವರ್ಗಾವಣೆ ಮಾಡಿದ್ದೆವು. ಈ ಪ್ರಸ್ಥಾಪನೆಯಲ್ಲಿ 5 ಜನ ಮಾನ್ಯ ಸದಸ್ಯರು ಈ ಕೈಗಾರಿಕೆಯನ್ನು ಪ್ರಾರಂಭ ಮಾಡಬೇಕೆಂದು ಅರ್ಜಿ ಹಾಕಿಕೊಂಡಿದ್ದರೋ ಅವರು ಮತ್ತೆ ಅರ್ಜಿ ಹಾಕುವಂಥ ಸಂದರ್ಭ ಅವರಿಗೆ ಆಗಲಿಲ್ಲ. ಮತ್ತೆ ಬೇಲೂರು ಪಟ್ಟಣದಲ್ಲಿ ಈ ಕೈಗಾರಿಕೆಯನ್ನು ಪ್ರಾರಂಭ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಇವತ್ತು ನಮ್ಮ ಇಲಾಖೆಯ ವತಿಯಿಂದ 10 ಎಕರೆಗಳಷ್ಟು ಜಾಗ ಸರ್ವೆ ನಂಬರ್ 84 ಮತ್ತು 128 ರಲ್ಲಿ ನಮ್ಮ ಕೈಗಾರಿಕೆಯನ್ನು ಪ್ರಾರಂಭ ಮಾಡುವುದಕ್ಕೆ ಬೇಕೆನ್ನುವ ಪಸ್ತಾವನೆಯನ್ನು ರೆವೆನ್ಯೂ ಅಧಿಕಾರಿಗಳ ಹತ್ತಿರ ನಾವು ಚರ್ಚೆಯನ್ನು ನಡೆಸಿದೆವು. ಹಾಗೂ ಈ ಜಾಗವನ್ನು ನಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುವ ಸಲುವಾಗಿ ನಾವು 57 ಸಾವಿರ ರೂಪಾಯಿಗಳನ್ನು ರೆವಿನ್ಯೂ ಅಧಿಕಾರಿಗಳಿಗೆ ನಮ್ಮ ಇಲಾಖೆಯ ವತಿಯಿಂದ ಕಟ್ಟಿದ್ದೇವೆ. ಸಧ್ಯದಲ್ಲೆ ಇದನ್ನು ನಮ್ಮ ಸ್ವಾಧೀನಕ್ಕೆ ಪಡೆದುಕೊಂಡ ತಕ್ಷಣವೇ ನಾವು ಕೈಗಾರಿಕೆಗಳ ಷೆಡ್ ನಿರ್ಮಾಣದ ಕೆಲಸವನ್ನು ಕೈಗೊಂಡು ಇದರಿಂದ ಅನುಕೂಲ ಪಡೆಯುವಂಥ ಸಂದರ್ಭವನ್ನು ನಾವು ಮುಂದಿನ ವರ್ಷದಲ್ಲಿ ಪ್ರಾರಂಭ ಮಾಡಿ ಅನುಕೂಲವಾಗುವಂಥ ರೀತಿಯಲ್ಲಿ ಈ ಕೆಲಸವನ್ನು ಮಾಡಿಕೊಡುತ್ತೇವೆನ್ನುವಂಥ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ : ಮಾನ್ಯ ಅಧ್ಯಕ್ಷರೇ, ಕೈಗಾರಿಕೆಗಳಿಗೋಸ್ಕರವಾಗಿ 5 ಜನ ಅರ್ಜಿ ಹಾಕಿದ್ದರು . ಅದಕ್ಕೋಸ್ಕರ 1-3 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಕೈಗಾರಿಕಾ ಎಸ್ಟೇಟನ್ನು ಪ್ರಾರಂಭಮಾಡುವುದಕ್ಕೆ ಅರ್ಜಿಗಳು ಬಂದಮೇಲೆ ಪ್ರಾರಂಭ ಮಾಡುತ್ತೀರೋ, ಇಲ್ಲ ಆ ಊರಿನಲ್ಲಿ ಕೈಗಾರಿಕೆಗಳು ಬೆಳೆಯಬೇಕೆಂಬ ದೃಷ್ಟಿಯಿಂದ ಕೈಗಾರಿಕಾ ಎಸ್ಟೇಟನ್ನು ಪಾರಂಭ ಮಾಡುತ್ತಿರೋ?

ಶ್ರೀ ಸಿ. ಆರ್. ಸಗೀರ್ ಅಹಮದ್ : ಸನ್ಮಾನ್ಯ ಅಧ್ಯಕ್ಷರೇ, 1980ನೇ ಇಸವಿಯಲ್ಲಿ ಬೇಲೂರು ಅಂಥ ಒಂದು ಸಣ್ಣ ಊರಿನಲ್ಲಿ ಕೈಗಾರಿಕೆಯನ್ನು ಪ್ರಾರಂಭ ಮಾಡುವಂಥ ಆಲೋಚನೆ ಸರ್ಕಾರಕ್ಕೆ ಇರಲಿಲ್ಲ. ಆದರೆ ಜನರು ಬೇಡಿಕೊಂಡ ನಂತರ ಈ ಕಾರ್ಯವನ್ನು ಪ್ರಾರಂಭ ಮಾಡಬೇಕೆಂಬ ದೃಷ್ಟಿಯಿಂದ ನಾವು ಈ ಜಮೀನನ್ನು ಅಕ್ವೈರ್ ಮಾಡಿಕೊಳ್ಳುವಂತಹ ಪ್ರಯತ್ನ ಮಾಡಿದ್ದೇವೆ. ಈಗ ಸರ್ಕಾರದ ಒಂದು ನೀತಿಯಿಂದಾಗಿ ಇಡೀ ರಾಜ್ಯದಲ್ಲಿಯೇ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕೆನ್ನುವ ಉದ್ದೇಶದಿಂದ ಬೇಲೂರು ಪಟ್ಟಣದಲ್ಲಿ 10 ಎಕರೆ ಜಾಗವನ್ನು ನಾವು ಅಕ್ವಯರ್ ಮಾಡುವ ಪ್ರಯತ್ನದಲ್ಲಿದ್ದೇವೆ. ಅದಕ್ಕೆ ತಕ್ಕಂತೆ ಹಣವನ್ನು ಕೊಟ್ಟಿದ್ದೇವೆ. ಇದರಿಂದ ಮುಂದಿನ ದಿನಗಳಲ್ಲಿ ಆ ಭಾಗದ ಜನರಿಗೆ ಲಾಭವಾಗುತ್ತದೆ ಎನ್ನುವ ಆಲೋಚನೆಯನ್ನು ಮಾಡಿ ಈ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ : ಮಾನ್ಯ ಅಧ್ಯಕ್ಷರೇ, ಆವತ್ತಿನ ಕಾಲದಲ್ಲಿ ಪ್ರತಿ ತಾಲ್ಲೂಕಿನಲ್ಲಿಯೂ ಕೈಗಾರಿಕಾ ಎಸ್ಟೇಟ್‌ಗಳನ್ನು ಮಾಡಬೇಕೆಂದು ಸರ್ಕಾರದ ಒಂದು ನೀತಿಯಾಗಿತ್ತು. ಅಂಥದ್ದರಲ್ಲಿ, ಬೇಲೂರಿನಂಥ ಸಣ್ಣ ಪಟ್ಟಣದಲ್ಲಿ ಮಾಡಲಿಕ್ಕೆ ಆಗುವುದಿಲ್ಲ, ಅವರು 5 ಜನ ಬಂದಿದ್ದಕ್ಕೋಸ್ಕರ ನಾವು ಮಾಡಿದ್ದೇವೆ ಎಂದು ಹೇಳುವುದು ಸತ್ಯಕ್ಕೆ ದೂರವಾದುದು. 1980ರಲ್ಲಿ ಅನೇಕ ತಾಲ್ಲೂಕುಗಳಲ್ಲಿ ಕೈಗಾರಿಕಾ ಎಸ್ಟೇಟ್‌ಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆ. ಎಷ್ಟೋ ಕಡೆ ಕೈಗಾರಿಕಾ ಷೆಡ್ಡುಗಳನ್ನು ಕಟ್ಟಿ ಆ ಕೈಗಾರಿಕಾ ಷೆಡ್‌ಗಳು ಇವತ್ತು ಖಾಲಿ ಬಿದ್ದಿವೆ. ಬೇರೆ ಬೇರೆ ತಾಲ್ಲೂಕುಗಳಲ್ಲಿ ಈ ರೀತಿಯಾಗಿದೆ. ಆದ್ದರಿಂದ ಇಲ್ಲಿ ಏತಕ್ಕೆ ತಾವು ಕಟ್ಟಲ್ಲಿಲ್ಲವೆಂದು ನಾನು ಕೇಳುತ್ತೇನೆ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ನಾನು ಮುಂಚೆ ಹೇಳಿದ ಹಾಗೆ, ಗೌರವಾನ್ವಿತ ಸದಸ್ಯರೇ ನಮ್ಮ ಇಲಾಖೆಗೆ ಒಂದು ಪತ್ರ ವ್ಯವಹಾರವನ್ನು ಮಾಡಿ ಈ ಪಟ್ಟಣದ ಮಧ್ಯಭಾಗದಲ್ಲಿ ಈ ಜಾಗ ಬರುವುದರಿಂದ ಇಲ್ಲಿ ಕೈಗಾರಿಕೆಯನ್ನು ಪ್ರಾರಂಭಮಾಡುವುದು ಸೂಕ್ತವಲ್ಲ, ಆ ದೃಷ್ಟಿಯಿಂದ ಈ ಜಾಗವನ್ನು ಕೃಷಿ ಇಲಾಖೆಗೆ ಕೊಡುವಂತದ್ದು ಸೂಕ್ತವೆಂದು ಅವರೇ ತೀರ್ಮಾನ ಮಾಡಿದ ನಂತರ ಈ ಜಾಗವನ್ನು ನಾವು ಕೃಷಿ ಇಲಾಖೆಗೆ ವರ್ಗಾಯಿಸಿದ್ದೇವೆ. ಆ ದೃಷ್ಟಿಯಿಂದ ಆ ಸಮಯದಲ್ಲಿ ಮಾಡಲಿಕ್ಕೆ ಸಾಧ್ಯವಾಗಲಿಲ್ಲವೆನ್ನುವ ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಇಚ್ಛಿಪಡುತ್ತೇನೆ.

<u>ವಿಷಯ :- ಸೋಮವಾರಪೇಟೆ ತಾಲ್ಲೂಕಿನ ರೇಷ್ಮೆ ಇಲಾಖೆಯಲ್ಲಿ, 1991ರಿಂದ ಹರಿಜನ ಗಿರಿಜನರಿಗೆ ಸೌಲಭ್ಯ ಕಲ್ಪಿಸುವ ಬಗ್ಗೆ.</u>

Q:569

ಶ್ರೀ ಎ. ಎಂ ಬೆಳ್ಳಿಯಪ್ಪ (ಸೋಮವಾರಪೇಟೆ) : ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?